# ಮಾನವೀಯ ಸಮಾಜ ರೂಪಿಸುವಲ್ಲಿ ವಚನಗಳ ಪಾತ್ರ

**ಜ್ಯೋತಿ ಎನ್. ಭಟ್**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಕಾಲೇಜು, ಬೆಂಗಳೂರು.

**DOI: https://doi.org/10.5281/zenodo.15490983**

## ABSTRACT:

ವಚನ ಸಾಹಿತ್ಯವು 12ನೇ ಶತಮಾನದ ಕನ್ನಡದ ವಿಶಿಷ್ಟ ಸಾಹಿತ್ಯಪ್ರಕಾರವಾಗಿದೆ. ಇದನ್ನು ಪಂಡಿತರಿಗೆ ಮೀಸಲಾಗಿದ್ದ ಸಾಹಿತ್ಯದ ಮೀರೆದು, ಸಾಮಾನ್ಯ ಜನರ ಬದುಕು, ಅನುಭವ, ತತ್ವಗಳನ್ನು ಸರಳವಾದ ಭಾಷೆಯಲ್ಲಿ ವ್ಯಾಖ್ಯಾನಿಸಿ ಸಮಾಜದಲ್ಲಿ ಜಾಗೃತಿ ತರಲು ಶರಣರು ಬಳಸಿದರು. ಮಾತನ್ನು ಮತಿಸಿದಾಗ ಮಾತ್ರ ವಚನವಾಗುವುದು ಎಂಬ ತತ್ವದೊಂದಿಗೆ, ವಚನಗಳು ಅನುಭವದ ಭಾವಗೀತೆಗಳಾಗಿವೆ. ಇದರಲ್ಲಿ ಧರ್ಮ, ನೀತಿ, ಜ್ಞಾನ, ಶ್ರಮ, ಸಮಾನತೆ, ಕಾಯಕ ಮತ್ತು ದಾಸೋಹದಂತಹ ಮಾನವ ಮೌಲ್ಯಗಳು ಸೊಗಸಾಗಿ ಪ್ರತಿಬಿಂಬಿಸುತ್ತವೆ. ಜಾತಿ, ಲಿಂಗ, ಧರ್ಮಗಳ ಭೇದವನ್ನು ತಿರಸ್ಕರಿಸಿ ಎಲ್ಲರಿಗೂ ಸಮಾನ ಸ್ಥಾನವಿರಬೇಕು ಎಂಬ ಸಂದೇಶ ನೀಡುತ್ತವೆ. ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮಪ್ರಭು, ಚನ್ನಬಸವಣ್ಣನಂತಹ ಶರಣರು ಸಮಾಜ ಸುಧಾರಣೆಗೆ ಮುಂಚೂಣಿಯಲ್ಲಿದ್ದರು. ಅವರು ಪುರಾಣಕಥೆಗಳನ್ನು ಬಳಸದೆ, ತಾವು ಅನುಭವಿಸಿದ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳನ್ನು ವಚನಗಳ ಮೂಲಕ ಪ್ರತಿಭಟಿಸಿದರು. ಕೃತಕ ಆಚರಣೆಗಳನ್ನು ತಿರಸ್ಕರಿಸಿ, ನೈತಿಕ ಶುದ್ಧತೆಯನ್ನು ಬಲಪಡಿಸಿದರು. ವಚನಗಳು ಕೇವಲ ಸಾಹಿತ್ಯವಲ್ಲದೆ, ಜೀವನ ದರ್ಶನವನ್ನೂ ನೀಡುತ್ತವೆ. ಇವುಗಳಲ್ಲಿ ಕಲಿತ ಮೌಲ್ಯಗಳು ಇಂದಿನ ಸವಾಲುಗಳಿಗೂ ಮಾರ್ಗದರ್ಶನ ನೀಡುತ್ತವೆ. ವಚನ ಸಾಹಿತ್ಯವು ಕನ್ನಡದಿಂದ ವಿಶ್ವಸಾಹಿತ್ಯಕ್ಕೆ ನೀಡಬಹುದಾದ ಅತ್ಯುನ್ನತ ಕೊಡುಗೆಯಾಗಿದೆ.

ವಚನ ಸಾಹಿತ್ಯವು ಕೇವಲ ಧಾರ್ಮಿಕ ಭಾವನೆಗಳನ್ನು ಮಾತ್ರವಲ್ಲ, ಬದಲಾಗಿ ಸಮಾಜದ ಬದಲಾವಣೆಗಾಗಿ ಹೊಸ ಚಿಂತನೆಗಳನ್ನು ನೀಡುವ, ಸಮಾನತೆಯ ಪರಿಕಲ್ಪನೆಯನ್ನು ನಾಟಿದ, ಜಾಗೃತಿ ಮೂಡಿಸುವ ಜೀವಂತ ವಾಕ್ಯಮಾಲೆಯಾಗಿದೆ. ಇಂದಿಗೂ ಈ ಸಾಹಿತ್ಯವು ಸಮಕಾಲೀನ ಸಮಸ್ಯೆಗಳಿಗೆ ಸಮಯೋಚಿತ ಪರಿಹಾರವಾಗುತ್ತದೆ.

## KEYWORDS:

ವಚನ, ಶರಣರು, ಅನುಭವ, ಕಾಯಕ, ಸಮಾನತೆ, ಶೀಲ.

**ಪೀಠಿಕೆ:**

**ವಚನ ಎಂದರೇನು?**

ಪಂಡಿತರಿಗೆ ಮೀಸಲಾಗಿದ್ದ ಸಾಹಿತ್ಯವನ್ನು ಜನಸಾಮಾನ್ಯರ ಬಳಿಗೆ ತೆಗೆದುಕೊಂಡು ಹೋದ ಸಾಹಿತ್ಯ ವಚನ ಸಾಹಿತ್ಯ. ಧಾರ್ಮಿಕ ಸಾಮಾಜಿಕ ಸಂಸ್ಕೃತಿ 12ನೇ ಶತಮಾನದ ಕಾಲದಲ್ಲಿ ಕನ್ನಡವನ್ನು ಬಿಟ್ಟು ಬೇರೆಲ್ಲೂ ಕಂಡುಬಂದಿಲ್ಲ.

ಸಾಹಿತ್ಯವನ್ನು ತುಂಬಾ ಸರಳವಾಗಿ ಎಲ್ಲಾ ಚೌಕಟ್ಟನ್ನು ಮೀರಿ ಎಲ್ಲೇ ಮೀರಿ ಬಂದ ಸಾಹಿತ್ಯ ವಚನ ಸಾಹಿತ್ಯ. ಮಾತನ್ನು ಮತಿಸಿದರೆ ವಚನವಾಗುತ್ತದೆ ಬರೀ ಮಾತು ವಚನವಾಗುವುದಿಲ್ಲ ಅಂತರಂಗದಲ್ಲಿ ಮತಿಸಿದ ಮಾತು ವಚನವಾಗುತ್ತದೆ ಅದಕ್ಕೆ "ಬಸವಣ್ಣ ನುಡಿದರೆ ಮುತ್ತಿನ ಹಾರದಂತಿರಬೇಕು ನೋಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ನುಡಿದರೆ ಸ್ಪಟಿಕದ ಶಲಕೆಯಂತಿರಬೇಕು ನೋಡಿದರೆ ಲಿಂಗ ಮೆಚ್ಚಿ ಹೌದೌದೆನ್ನ ಬೇಕು" ಎನ್ನುತ್ತಾರೆ. ಅಲ್ಲಮಪ್ರಭು "ಮಾತೇಂಬುದು ಜ್ಯೋತಿರ್ಲಿಂಗ ಎಂದಿದ್ದಾರೆ".

ನಡೆ ನುಡಿ ಒಂದಾಗುವುದು ಮಾತ್ರ ವಚನ ಶರಣರು ನಡೆದದ್ದನ್ನೇ ನುಡಿದು ತೋರಿಸಿದರದ ಅವರು ಕಟ್ಟಿಕೊಟ್ಟರೆ ಸಾಹಿತ್ಯವನ್ನು ವಚನ ಸಾಹಿತ್ಯವೆಂದು ಕರೆಯುತ್ತಾರೆ.

ವಚನ ಎಂದರೆ ಸಂಸ್ಕೃತದಲ್ಲಿ ಮಾತು, ಮಾತನಾಡುವುದು ವ್ಯಕ್ತಪಡಿಸುವುದು ಎಂಬರ್ಥವಿದೆ. ಆದರೆ ಅಲ್ಲಿ ಗದ್ಯ ವೆನ್ನುವ ಅರ್ಥವಾಗಲಿ, ಒಂದು ಬಗೆಯ ಸಾಹಿತ್ಯಪ್ರಕಾರ ಎನ್ನುವ ಅರ್ಥವಾಗಲಿ ಇಲ್ಲ.

ವಚನ ಎನ್ನುವುದು ಕನ್ನಡದಲ್ಲಿ ವಿಶಿಷ್ಟ ಸಾಹಿತ್ಯ ಪ್ರಕಾರದ ಹೆಸರು. ಅನ್ಯ ಭಾಷೆಗಳ ಯಾವುದೇ ಮಾದರಿಯನ್ನು ಯಾವುದೇ ದೃಷ್ಟಿಯಿಂದಲೂ ಅನುಕರಿಸದೆ ಅಥವಾ ಆದರ್ಶವಾಗಿಟ್ಟುಕೊಳ್ಳದೆ ಕೇವಲ ಅನುಭವದಿಂದಲೇ ಮೂಡಿ ರೂಪಿತವಾದ ಸಾಹಿತ್ಯಪ್ರಕಾರ.

ತೀನಂಶ್ರೀ ಅವರ ಪ್ರಕಾರ "ವಚನಗಳ ಧಾಟಿ ಪದ್ಯದಷ್ಟು ಬಿಗಿಯಲ್ಲಿ, ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ, ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ ಪದ್ಯದ ನಡುವಿನ ಒಂದು ಮಾದರಿಯಂದೆ ಹೇಳಬೇಕಾಗುವುದು."

ಇನ್ನು ವಚನಗಳು ಗದ್ಯವೋ ಅಥವಾ ಪದ್ಯವೋ ಎಂದು ಹೇಳುವುದು ಕಷ್ಟಕರ. ಆದರೂ ಇಲ್ಲಿ ಸಾಹಿತ್ಯ ಎಂಬ ಮಾತು ಬರುತ್ತದೆ. ಆದರೆ ಇದು ವಾಗ್ಮಯ ಎಂಬ ವಿಶೇಷಾರ್ಥದಲ್ಲಿ ಕವಿಗಳು ಸಹೃದಯರು ತಿಳಿದುಕೊಂಡ ಅರ್ಥದಲ್ಲಿ ಬಳಕೆಯಾಗಿಲ್ಲ. ಬದಲಾಗಿ ಇಲ್ಲಿ ಸಾಹಿತ್ಯ ಎಂದರೆ ಹೊಂದಾಣಿಕೆ, ಸಂಯೋಗ,

ಒಂದು ಮತ್ತೊಂದಕ್ಕೆ ಇರಬೇಕಾದ ಸಂಬಂಧ ಎಂಬ ಅರ್ಥದಲ್ಲಿ ಬಳಕೆಯಾಗಿದೆ.

ವಚನಕಾರರು ಕವಿಗಳಲ್ಲ ಅವರು ಬರೆದದ್ದು ಕಾವ್ಯವಲ್ಲ ಅವರ ಶೋತೃ ವರ್ಗವು ಕಾವ್ಯಾಸ್ವಾದನೆಯ ಮಾಡುವ ಪಂಡಿತ ವರ್ಗವಲ್ಲ. ಅವರು ಮುಖ್ಯವಾಗಿ ಸಾಮಾಜಿಕ ಪ್ರಜ್ಞೆಯುಳ್ಳ ನೀತಿಬೋಧಕರು, ಸಮಾಜ ವಿಮರ್ಶಕರು. ತಮ್ಮ ಅನುಭವವನ್ನು ಜನತೆಯ ಜೊತೆ ಹಂಚಿಕೊಳ್ಳಲು ಬಯಸಿದವರು. ಅವರ ಶ್ರೋತ್ರು ವರ್ಗ ಮುಖ್ಯವಾಗಿ ಸಾಮಾನ್ಯ ಜನತೆ. ಒಂದು ನೀತಿಯನ್ನು ಅನಿಸಿಕೆಯನ್ನು ಅಥವಾ ಮೌಲ್ಯವನ್ನು ಪರಿಣಾಮಕಾರಿಯಾಗಿ ಹೇಳಿ ಅದು ಸಾಮಾನ್ಯರ ಮನಸ್ಸನ್ನು ಪರಿಣಾಮಕಾರಿಯಾಗಿ ಮುಟ್ಟಿ ಉಳಿಯುವಂತಾಗಬೇಕು ಎಂಬುದು ವಚನಕಾರರ ಮೂಲ ಉದ್ದೇಶ.

ವಚನ ಸಾಹಿತ್ಯ ಕನ್ನಡ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಯಾಗಿದೆ. ವಚನಕಾರರ ಅನುಭವ, ಜ್ಞಾನ, ಜೀವನ ಮೌಲ್ಯಗಳು, ಸಮಾಜದ ಕಳಕಳಿ ನಮ್ಮೆಲ್ಲರಿಗೂ ದಾರಿದೀಪ.

ಹನ್ನೆರಡನೆಯ ಶತಮಾನದ ಬಸವಣ್ಣ ಮತ್ತು ಇತರ ಶಿವಶರಣರು ಸರ್ವ ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು. ಇವರುಗಳು ಹೊಸ ಧರ್ಮದ ಸ್ಥಾಪನೆಯನ್ನೇನೂ ಮಾಡಲಿಲ್ಲ. ಬದಲಿಗೆ ಹಿಂದೂ ಧರ್ಮದ ಒಂದು ಭಾಗವಾಗಿದ್ದ ವೀರಶೈವ ಧರ್ಮವನ್ನು ಜನಪ್ರಿಯಗೊಳಿಸಿದರು.

ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯ ಒಂದು ಚಳವಳಿಯೂ ಆಯಿತು. ವಚನಕಾರರು ಸ್ವತಂತ್ರ ಮನೋಭಾವದವರು. ಅವರು ಸಾಹಿತ್ಯ ರಚಿಸಬೇಕೆಂಬ ಉದ್ದೇಶದಿಂದ ಬರೆದವರಲ್ಲ. ದಿನದಿನದ ತಮ್ಮ ಅನುಭವಗಳನ್ನು ವಚನಗಳ ರೂಪದಲ್ಲಿ ಹೇಳಿದರು. ಅವರು ರಾಮಾಯಣ, ಮಹಾಭಾರತ ಅಥವಾ ಪುರಾಣಗಳಿಂದ ವಸ್ತುವನ್ನು ಆಯ್ದುಕೊಳ್ಳಲಿಲ್ಲ. ವಚನಗಳು ಸ್ವತಂತ್ರವಾಗಿರುವಂತಹವು, ಬಿಡಿ ಬಿಡಿಯಾಗಿ ಆಶುಕವಿತೆಗಳಂತೆ ಕಾಣುತ್ತವೆ. ಶರಣರು ತಾವು ಅಂದಿನ ಸಮಾಜದಲ್ಲಿ ಕಂಡ ಅನ್ಯಾಯ, ಅಧರ್ಮ, ಅಸಮಾನತೆ, ಮೂಢನಂಬಿಕೆ ಮತ್ತು ಡಾಂಭಿಕತೆಯನ್ನು ವಚನಗಳ ಮೂಲಕ ಪ್ರತಿಭಟಿಸಿದರು. ಸಮಾಜ ಸುಧಾರಣೆ ಮತ್ತು ಶಿವಭಕ್ತಿ ಪ್ರಸಾರ ಅವರ ಮುಖ್ಯ ಉದ್ದೇಶವಾಗಿತ್ತು, ಅವರ ಶೈಲಿಯಲ್ಲಿ ವಾಗಾಡಂಬರ ಕಡಿಮೆ, ಅರ್ಥವಾಗದ ಕಠಿಣ ಶಬ್ದಗಳಿಲ್ಲ. ಅಲ್ಲಲ್ಲಿ ಅಲಂಕಾರ, ರೂಪಕ, ವರ್ಣನೆಗಳು ಬಂದರೂ ಹೆಚ್ಚಿನ ವಚನಗಳು ಸರಳವಾಗಿವೆ, ಸುಂದರವಾಗಿವೆ. ಆಡುವ ಭಾಷೆಯಲ್ಲಿ ಜನರಿಗೆ ಅರ್ಥವಾಗುವಂತೆ ಆದರ್ಶ ಜೀವನದ ರೀತಿ ನೀತಿಗಳನ್ನು ಉಪದೇಶಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ನೂರಾರು ಜನ ವಚನಕಾರರಿದ್ದಾರೆ. ಕೆಳವರ್ಗದಿಂದ ಬಂದವರಿದ್ದಾರೆ, ಮಹಿಳಾ ವಚನಕಾರ್ತಿಯರಿದ್ದಾರೆ. ಬೇರೆ ಬೇರೆ ಕಾಯಕದವರಿದ್ದಾರೆ. ಅವರ ವಚನಗಳು ನಿರಾಭರಣ ಸುಂದರಿಯಂತೆ ಮನಸೆಳೆಯುತ್ತವೆ. ಈ ರೀತಿಯ ಸಾಹಿತ್ಯವು ಭಾರತದ ಬೇರಾವ ಭಾಷೆಗಳಲ್ಲೂ ಇಲ್ಲ. ಕನ್ನಡದಿಂದ. ವಿಶ್ವಸಾಹಿತ್ಯಕ್ಕೆ ಏನಾದರೂ ಕಾಣಿಕೆ ನೀಡಬೇಕೆಂದರೆ ಆಗ ನಾವು ವಚನ ಸಾಹಿತ್ಯವನ್ನೇ ಆರಿಸಿಕೊಳ್ಳಬೇಕಾಗುತ್ತದೆ.

ವಚನವೆಂದರೆ ಮಾತು, ಪ್ರಮಾಣ. ಭಾವಗೀತೆಯ ಗುಣ ಹೊಂದಿ ಗದ್ಯರೂಪದಲ್ಲಿರುವ ಶರಣರ ಬೋಧೆಯೇ ವಚನಗಳು. ಜ್ಞಾನ ಇದುವರೆಗೆ ಯಾವುದೋ ಒಂದು ಧರ್ಮದ ಸ್ವತ್ತಾಗಿತ್ತು. ಶರಣರು ಅದನ್ನು ಜನಸಾಮಾನ್ಯರೆಲ್ಲರಿಗೂ ಒದಗುವಂತೆ ಮಾಡಿದರು. ಮೇಲ್ಜಾತಿ ಕೀಳ್ಜಾತಿ ಎಂಬ ತಾರತಮ್ಯ ಇಲ್ಲಿಲ್ಲ. ಆತ್ಮೋದ್ಧಾರದ ದಾರಿ, ಧರ್ಮ, ನೀತಿಗಳು ಎಲ್ಲರಿಗೂ ತೆರೆದಿರಬೇಕೆಂಬುದೇ ವಚನಕಾರರ ಧ್ಯೇಯ.

ಇದರಲ್ಲಿ ಜಾತಿ ಮತ ಪಂಥಗಳ ಪ್ರಶ್ನೆಯಿಲ್ಲ. ಕುಲಕ್ಕಿಂತ ಶೀಲವೇ ಮುಖ್ಯ. ಕಾಯಕವೇ ಎಲ್ಲರಿಗೂ ಅತ್ಯಗತ್ಯ. ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ. ಹಗ್ಗ ಹೊಸೆಯುವವ, ಸೌದೆ ಹೊರುವವ, ಚಪ್ಪಲಿ ಹೊಲಿಯುವವ, ಹೆಂಡಮಾರುವವ, ಅಗಸ, ಬೆಸ್ತ, ಬೇಡ – ಇವರೆಲ್ಲರೂ ವೇದ ಓದುವ ಬ್ರಾಹ್ಮಣನಷ್ಟೇ ಮುಖ್ಯರು. ಇದು ವಚನಕಾರರ ಸಿದ್ಧಾಂತ. ಅವರ ಜೀವನದ ದೃಷ್ಟಿಯಂತೆಯೇ ಸಾಹಿತ್ಯದ ಸೃಷ್ಟಿ ಕೂಡಾ.

**ವಚನ ಚಳುವಳಿ:**

ವಚನ ಚಳುವಳಿ ಜೀವ ಪಡೆದು 9 ಶತಮಾನಗಳಿಗೂ ಹೆಚ್ಚು ಸಮಯ ಆಗಿದ್ದರೂ ಅವು ಪ್ರಸಕ್ತ ಸನ್ನಿವೇಶಕ್ಕೆ ಸಮಕಾಲೀನ ಸವಾಲುಗಳಿಗೆ ಸಿದ್ದೌಷದಂತೆ, ಅತ್ಯುತ್ತಮ ಚಿಕಿತ್ಸೆಯಂತೆ ಪ್ರಸ್ತುತವಾಗಿವೆ. ಸಾರ್ವಕಾಲಿಕ ಮೌಲ್ಯಗಳಾಗಿ ಸಮಕಾಲಿನ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳಾಗಿವೆ.

ಜಾತಿ ಭೇದ ಪದ್ದತಿಗಳು, ಭಾರತವನ್ನು ವಿನಾಶದತ್ತ ಉಪಕ್ರಮಿಸುತ್ತಿದ್ದ ಕ್ಲಿಷ್ಟ ಸನ್ನಿವೇಶದಲ್ಲಿ ಭಾರತೀಯ ಸಮಾಜಕ್ಕೆ ಹೊಸ ಸಮರ್ಥ, ದಿಗ್ದರ್ಶಕ, ಬಲಾಢ್ಯ, ಚಿಂತಕ, ದಾರ್ಶನಿಕ ಮಾರ್ಗದರ್ಶಕದ ಅನಿವಾರ್ಯತೆಯನ್ನು ಸೃಷ್ಠಿಸಿದ್ದ ಸಂಕಷ್ಟ ಸಮಯದಲ್ಲಿ ಉದಯಿಸಿದ ಬೆಳಕೇ ವಚನ ಸಾಹಿತ್ಯ.

ವಿಜ್ಞಾನದ ವಿಧ್ವಂಸಕ ಮುಖವನ್ನು ನೋಡುತ್ತಿರುವ ಪರಿಸ್ಥಿತಿಯಲ್ಲಿ ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ.

**ನಮಗೆ ಎಂದಿನದೇ ಸಾಕು**

**ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ**
**ಮಾರಯ್ಯ ಪ್ರಿಯ ಅಮರೇಶ್ವರನ ಲಿಂಗ ಕೊಟ್ಟು**
**ಕಾಯಕವೇ ಸಾಕು ಮಾರಯ್ಯ**

ಹೀಗೆ ಹೇಳುವ ಮೂಲಕ ದುರಾಸೆಯನ್ನು ಬಿಡಲು ತಿಳಿಸಿ ಆತನು ತಂದಿದ್ದ ಅಧಿಕ ಅಕ್ಕಿಯನ್ನು ಅಲ್ಲೇ ಸುರಿದು ಬರಲು ತಿಳಿಸುತ್ತಾಳೆ. ಹೆಚ್ಚಿಗೆ ಏಕೆ ತಂದೆ ಎಂದು ಪ್ರಶ್ನಿಸುತ್ತಾಳೆ. ಇಂತಹ ದಿಟ್ಟತನ, ಸಾಧ್ವಿ ನಡವಳಿಕೆ ಈಗ ಎಲ್ಲರಲ್ಲಿಯೂ ಬೆಳೆದಿದ್ದೇ ಆದರೆ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಮೂಡಿರಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬನು ತನ್ನ ಕಾಯಕಕ್ಕೆ ನಿಷ್ಠರಾಗಬೇಕೆಂದು ಸುಮ್ಮನೆ ಕುಳಿತಿದ್ದ ತನ್ನ ಪತಿಗೆ ಲಕ್ಕಮ್ಮನು

**ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ**
**ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲಕ್ಕಿಯ ತಂದು**
**ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ**
**ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ**

ಎಂದು ಮಾರಯ್ಯನನ್ನು ಎಚ್ಚರಿಸಿ, ಕಾಯಕಕ್ಕೆ ತೆರಳುವಂತೆ ಮಾಡುತ್ತಾಳೆ. ದುಡಿಮೆಗೆ ಗಂಟೆಗಿಷ್ಟು, ಹೊತ್ತಿಗಿಷ್ಟು ಸಂಭಾವನೆ ಪಡೆದು, ಏನೂ ದುಡಿಯದೆ ಸೋಮಾರಿಗಳಾಗಿ ಪ್ರತಿಫಲ ನಿರೀಕ್ಷಿಸುವ ಜನರಿಗೆ ಈ ನಡೆ ದಾರಿದೀಪ.

ವಚನಗಳು ಕಳೆಕಿತ್ತು, ಕೃಷಿ ಮಾಡಿ ಜೀವನೋಪಾಯಕ್ಕಾಗಿ ಬೆಳೆದ ಆಹಾರ ಧಾನ್ಯಗಳಂತೆ ಬದುಕಿಗೆ ಉತ್ತಮ ಮಾರ್ಗವನ್ನು ತೋರಿವೆ. ವಚನ ಸಾಹಿತ್ಯ ಸಂಪ್ರದಾಯಕ್ಕಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿ ವಿಶ್ವಧರ್ಮದ ಸಾಲಿನಲ್ಲಿ ನಿಂತಿದೆ.

ಸದಾಚಾರದಲ್ಲಿ ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯವುಂಟು, ಕಾಯಕವೆಂದರೆ ಜೀವನೋಪಾಯಕ್ಕೆ ಕೈಗೊಂಡ ವೃತ್ತಿ, ಎಲ್ಲ ವೃತ್ತಿಗಳೂ ಗೌರವಯುತವಾದುದೆಂದೂ, ಅವುಗಳಲ್ಲಿ ಯಾವುದೂ ಹೆಚ್ಚು ಕಡಿಮೆ ಇಲ್ಲವೆಂದು ವೃತ್ತಿಯಿಂದ ಜಾತಿಗಳು ಏರ್ಪಡುವುದಿಲ್ಲವೆಂದು ವಚನ ಧರ್ಮ ಹೇಳುತ್ತದೆ.

**ಕಾಸಿ ಕಮ್ಮಾರವಾದ, ಬೀಸಿಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ**
**ಇದು ಕಾರಣ ಕೂಡಸಂಗಮದೇವ ಲಿಂಗ**
**ಸಂಗವನರಿತವನೇ ಕುಲಜನು**

ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಚಿಂತನೆ ಆಲೋಚನೆ ತಾರ್ಕಿಕತೆ, ಒಳ್ಳೆಯ ಕೆಟ್ಟದ್ದನ್ನು ವಿಮರ್ಶಿಸುವ, ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ. ತನ್ನ ಜೀವನದ ಶಿಲ್ಪಿ ತಾನೇ ಎಂದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭಾ ಸಂಪನ್ನತೆಯನ್ನು

ತಾನೇ ಎಂದೂ ಅರಿಯಲಾರರು.

**ಎಲ್ಲ ಎಲ್ಲವನರಿದು ಫಲವೇನಯ್ಯ**
**ತನ್ನಲ್ಲಿ ಅರಿವು ಸ್ವಯಂ ಆಗಿರಲು**
**ಅನ್ಯರ ಕೇಳಲುಂಟೇ ಚನ್ನಮಲ್ಲಿಕಾರ್ಜುನ**

ಎನ್ನುವ ಅಕ್ಕನ ಮಾತುಗಳು ಮೊದಲು ತನ್ನನ್ನು ಅರಿತುಕೊಳ್ಳುವ ಅಗತ್ಯವನ್ನು ಅಂದೇ ಪ್ರತಿಪಾದಿಸಿದ್ದಾರೆ. ಅಜ್ಞಾನಿಗಳ, ವಿಚಾರಶೂನ್ಯರ ಸಹವಾಸ ಮಾಡದೆ ಸಜ್ಜನರ ಜ್ಞಾನಿಗಳ ಸಹವಾಸ ಮಾಡುವುದು ಅಮೃತದ ಸವಿಗೆ ಹೋಲಿಸಿ

**ಅರಿಯದವರೊಡನೆ ಸಂಗವ ಮಾಡಿದರೆ**
**ಕಲ್ಲ ಹೊಯ್ದು ಕಿಡಿಯ ತೆಗೆದು ಕೊಂಬಂತೆ**
**ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ**
**ಸಂಗವ ಮಾಡಿದೊಡೆ ಕರ್ಪೂರಗಿರಿಯನು ಉರಿಕೊಂಬಂತೆ**

ಎನ್ನುತ್ತಾ ಶರಣರ ಸಾಂಗತ್ಯ ನಮ್ಮನ್ನು ಸನ್ಮಾರ್ಗದೆಡೆಗೆ ಔನ್ನತ್ಯದೆಡೆಗೆ ಕೊಂಡೊಯ್ಯುವ ದಿಶೆಯಲ್ಲಿ ತಿಳಿಸಿಕೊಟ್ಟಿದ್ದಾರೆ.

**ವಚನ ಸಾಹಿತ್ಯದ ಲಕ್ಷಣ:**

**ತಾಳಮಾನ ಸರಸವನರಿ ಓಜೆ**
**ಬಜಾವಣಿಯ ಲೆಕ್ಕವನರಿಯೇ ಅಮೃತ ಗಣವರಿಯೇ**
**ಕೂಡಲಸಂಗಮದೇವ ನಿನಗೆ ಕೇಳಿಲ್ಲವಾಗಿ ಆನು ಒಲಿದಂತೆ ಹಾಡುವೆ**

ತಾಳ ಲಘು ಗುರು ತನಗೆ ಗೊತ್ತಿಲ್ಲ ತಾಳವನ್ನು ಮೀರಿದಂತಹ ಸಾಹಿತ್ಯ ವಚನ ಸಾಹಿತ್ಯ ಓಜೆ ಅಂದರೆ ರೀತಿ ಸಾಲು ಬರವಣಿಗೆಯ ರೀತಿ ವಾದ್ಯ ಪರಿಕರಗಳನ್ನು ಇಟ್ಟುಕೊಳ್ಳುವುದು ತನಗೆ ಗೊತ್ತಿಲ್ಲ ದೇವಗಣ ಹೋಗುತ್ತಿಲ್ಲ ಯಾವುದೇ ವಿಂಗಡಣೆಗೆ ಸಿಲುಕುವಂತಹ ಸಾಹಿತ್ಯವಲ್ಲ ತನಗೆ ಇಷ್ಟ ಬಂದಂತೆ ಹಾಡುವೆ ಎಂದು ಬಸವಣ್ಣನವರು ಹೇಳಿದ್ದಾರೆ.

**ವಚನ ಸಾಹಿತ್ಯ ಧಾರ್ಮಿಕ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆ:**

**ಬಸವಣ್ಣನವರು ತಮ್ಮದೇ ಆದ ಹೊಸ ಸಮುದಾಯವನ್ನೇಕೆ ಸ್ಥಾಪಿಸಿದರು? ಆಗಿನ ಸಮಾಜದಲ್ಲಿ ಅವರು ಕಂಡ ನ್ಯೂನತೆಗಳೇನು?**

ಬಸವಣ್ಣನವರ ಕಾಲದ ಸಮಾಜದಲ್ಲಿ ಅನೇಕ ನ್ಯೂನತೆಗಳಿದ್ದವು. (ಈಗಲೂ ಸಂಪೂರ್ಣವಾಗಿ ಬದಲಾವಣೆಯೇನೂ ಆಗಿಲ್ಲ. ) 1. ಅಸ್ಪೃಶ್ಯತೆ, ಮೌಢ್ಯ, ಅಜ್ಞಾನ ಮತ್ತು ಕಂದಾಚಾರಗಳು 2. ಬೇರೆ ಬೇರೆ ಜಾತಿಗಳವರು ಪರಸ್ಪರ ಭೋಜನ ಮಾಡಲು ನಿಷೇಧ. 3. ಅಂತೆಯೇ ಪರಸ್ಪರ ವಿವಾಹಸಂಬಂಧ ಮಾಡಿಕೊಳ್ಳಲು ನಿಷೇಧ. 4. ಹಲವು ಜಾತಿಗಳಿಗೆ ವೇದಾಧ್ಯಯನ ಸವಲತ್ತು ನಿರಾಕರಣೆ. 5. ಕೆಲವು ವೃತ್ತಿಗಳನ್ನು

ಕೈಗೊಳ್ಳಲು ನಿರಾಕರಣೆ. 6. ವಿಪರೀತ ಮಡಿ–ಮೈಲಿಗೆ ಪರಿಕಲ್ಪನೆ. 7. ಸ್ತ್ರೀಯರು ಅನೇಕ ವಿಷಯಗಳಲ್ಲಿ ಪುರುಷರಿಗಿಂತ ಕೀಳೆಂಬ ಭಾವನೆ. 8. ವಾಮಪಂಥೀಯ ಆಚರಣೆಗಳು, ಕೆಳವರ್ಗದವರ ಪ್ರಾಣಿಬಲಿ ಮುಂತಾದ ಕ್ಷುದ್ರ ಆಚರಣೆಗಳು. ಹನ್ನೆರಡನೆಯ ಶತಮಾನದ ಬಸವಣ್ಣ ಮತ್ತು ಇತರ ಶಿವಶರಣರು ಸರ್ವ ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು. ಇವರುಗಳು ಹೊಸ ಧರ್ಮದ ಸ್ಥಾಪನೆಯನ್ನೇನೂ ಮಾಡಲಿಲ್ಲ. ಬದಲಿಗೆ ಹಿಂದೂ ಧರ್ಮದ ಒಂದು ಭಾಗವಾಗಿದ್ದ ವೀರಶೈವ ಧರ್ಮವನ್ನು ಜನಪ್ರಿಯಗೊಳಿಸಿದರು. ವೀರಶೈವ ಧರ್ಮದ ಸ್ಥಾಪಕ ಬಸವಣ್ಣನವರಲ್ಲ – ಸ್ಥಾಪಕರು ಯಾರೋ ತಿಳಿಯದು. ಬಸವಣ್ಣನವರು ಆರಂಭದಲ್ಲಿ ಕೂಡಲಸಂಗಮದಲ್ಲಿದ್ದಾಗ ಸಂಗಯ್ಯ ಎಂಬ ಗುರುವಿನಿಂದ ಶೈವದೀಕ್ಷೆಯನ್ನು ಪಡೆದು ಬಳಿಕ ಚೆನ್ನಬಸವಣ್ಣನವರ ಮೂಲಕ ವೀರಶೈವದ ಪರಿಚಯವಾಗಿ ತಮ್ಮ ಕರಸ್ಥಲದ ಸಂಗಮನಾಥನಿಗೆ ಸಲ್ಲಿಸುತ್ತಿದ್ದ ಶೈವಾಚಾರದ ಪೂಜೆಯನ್ನು ಕೈಬಿಟ್ಟು ವೀರಶೈವದ ರೀತಿಯಲ್ಲಿ ಪೂಜೆ ಸಲ್ಲಿಸಲಾರಂಭಿಸಿದರು. ಚೆನ್ನಬಸವಣ್ಣನವರನ್ನು ಬಸವಣ್ಣನವರು ಕೃತಜ್ಞತೆಯಿಂದ ಸ್ಮರಿಸಿರುವ ವಚನ ಹೀಗಿದೆ: ಎನ್ನ ಬಂದ ಭವಂಗಳನು ಪರಿಹರಿಸಿ, ಎನಗೆ ಭಕ್ತಿಘನವೆತ್ತಿ ತೋರಿ, ಎನ್ನ ಹೊಂದಿದ ಶೈವಮಾರ್ಗಂಗಳನತಿಗಳೆದು, ನಿಜವೀರಶೈವಾಚಾರವನರುಹಿ ತೋರಿ, ಎನ್ನ ಕರಸ್ಥಲದ ಸಂಗಮನಾಥನಲ್ಲಿ ಮಾಡುವ ಜಪ ಧ್ಯಾನ ಅರ್ಚನೆ ಉಪಚರಿಯ ಅರ್ಪಿತ ಪ್ರಸಾದಭೋಗಂಗಳಲ್ಲಿಸಂದಿಸಿದ ಶೈವಕರ್ಮವ ಕಳೆದು, ಭವಮಾಲೆಯ ಹರಿದು, ಭಕ್ತಿಮಾಲೆಯನಿತ್ತು, ಭವಜ್ಞಾನವ ಕೆಡೆಮೆಟ್ಟಿ, ಭಕ್ತಿಜ್ಞಾನವ ಗಟ್ಟಿಗೊಳಿಸಿ, ಭವಮಾಟಕೂಟವ ಬಿಡಿಸಿ, ಭಕ್ತಿಮಾಟಕೂಟವ ಹಿಡಿಸಿ, ಭವಶೇಷವನುತ್ತರಿಸಿ, ಭಕ್ತಿಶೇಷವನಿತ್ತು, ಎನಗೆ, ಎನ್ನ ಬಳಿವಿಡಿದು ಬಂದ ಶರಣಗಣಂಗಳೆಲ್ಲರಿಗೆ ಶಿವಸದಾಚಾರದ ಘನವನರುಹಿ ತೋರಿ, ಮತ್ರ್ಯಲೋಕದಲ್ಲಿ ಸತ್ಯಸದಾಚಾರವನು ಹರಿಸಿ, ಶಿವಭಕ್ತಿಯನುದ್ಧರಿಸಿ, ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣ ಎನ್ನನಾಗುಮಾಡಿ ಉಳುಹಿದನಾಗಿ ಇನ್ನೆನಗೆ ಭವವಿಲ್ಲದೆ, ಬಂಧನವಿಲ್ಲದೆ, ಭಕ್ತಿ ಮಾಟಕೂಟದ ಗೊತ್ತಿನಲ್ಲಿರ್ದು ನಾನು ಚೆನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕುವೆನು. ವಚನ ಸಾಹಿತ್ಯದ ಮಹತ್ವ ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯ ಒಂದು ಚಳವಳಿಯೂ ಆಯಿತು. ವಚನಕಾರರು ಸ್ವತಂತ್ರ ಮನೋಭಾವದವರು. ಅವರು ಸಾಹಿತ್ಯ ರಚಿಸಬೇಕೆಂಬ ಉದ್ದೇಶದಿಂದ ಬರೆದವರಲ್ಲ. ದಿನದಿನದ ತಮ್ಮ ಅನುಭವಗಳನ್ನು ವಚನಗಳ ರೂಪದಲ್ಲಿ ಹೇಳಿದರು. ಅವರು ರಾಮಾಯಣ, ಮಹಾಭಾರತ ಅಥವಾ ಪುರಾಣಗಳಿಂದ ವಸ್ತುವನ್ನು ಆಯ್ದುಕೊಳ್ಳಲಿಲ್ಲ. ವಚನಗಳು ಸ್ವತಂತ್ರವಾಗಿರುವಂತಹವು, ಬಿಡಿ ಬಿಡಿಯಾಗಿ ಆಶುಕವಿತೆಗಳಂತೆ ಕಾಣುತ್ತವೆ. ಶರಣರು ತಾವು ಅಂದಿನ

ಸಮಾಜದಲ್ಲಿ ಕಂಡ ಅನ್ಯಾಯ, ಅಧರ್ಮ, ಅಸಮಾನತೆ, ಮೂಢನಂಬಿಕೆ ಮತ್ತು ಡಾಂಭಿಕತೆಯನ್ನು ವಚನಗಳ ಮೂಲಕ ಪ್ರತಿಭಟಿಸಿದರು. ಸಮಾಜ ಸುಧಾರಣೆ ಮತ್ತು ಶಿವಭಕ್ತಿ ಪ್ರಸಾರ ಅವರ ಮುಖ್ಯ ಉದ್ದೇಶವಾಗಿತ್ತು, ಅವರ ಶೈಲಿಯಲ್ಲಿ ವಾಗಾಡಂಬರ ಕಡಿಮೆ, ಅರ್ಥವಾಗದ ಕಠಿಣ ಶಬ್ದಗಳಿಲ್ಲ. ಅಲ್ಲಲ್ಲಿ ಅಲಂಕಾರ, ರೂಪಕ, ವರ್ಣನೆಗಳು ಬಂದರೂ ಹೆಚ್ಚಿನ ವಚನಗಳು ಸರಳವಾಗಿವೆ, ಸುಂದರವಾಗಿವೆ. ಆಡುವ ಭಾಷೆಯಲ್ಲಿ ಜನರಿಗೆ ಅರ್ಥವಾಗುವಂತೆ ಆದರ್ಶ ಜೀವನದ ರೀತಿ ನೀತಿಗಳನ್ನು ಉಪದೇಶಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ನೂರಾರು ಜನ ವಚನಕಾರರಿದ್ದಾರೆ. ಕೆಳವರ್ಗದಿಂದ ಬಂದವರಿದ್ದಾರೆ, ಮಹಿಳಾ ವಚನಕಾರ್ತಿಯರಿದ್ದಾರೆ. ಬೇರೆ ಬೇರೆ ಕಾಯಕದವರಿದ್ದಾರೆ. ಅವರ ವಚನಗಳು ನಿರಾಭರಣ ಸುಂದರಿಯಂತೆ ಮನಸೆಳೆಯುತ್ತವೆ. ಈ ರೀತಿಯ ಸಾಹಿತ್ಯವು ಭಾರತದ ಬೇರಾವ ಭಾಷೆಗಳಲ್ಲೂ ಇಲ್ಲ. ಕನ್ನಡದಿಂದ ವಿಶ್ವಸಾಹಿತ್ಯಕ್ಕೆ ಏನಾದರೂ ಕಾಣಿಕೆ ಆಗಿದೆ ಅಂದರೆ ವಚನ ಸಾಹಿತ್ಯವೆಂದೇ ಹೇಳಬೇಕು. ವಚನವೆಂದರೆ ಮಾತು, ಪ್ರಮಾಣ. ಭಾವಗೀತೆಯ ಗುಣ ಹೊಂದಿ ಗದ್ಯರೂಪದಲ್ಲಿರುವ ಶರಣರ ಬೋಧೆಯೇ ವಚನಗಳು. ಜ್ಞಾನ ಇದುವರೆಗೆ ಯಾವುದೋ ಒಂದು ಧರ್ಮದ ಸ್ವತ್ತಾಗಿತ್ತು. ಶರಣರು ಅದನ್ನು ಜನಸಾಮಾನ್ಯರೆಲ್ಲರಿಗೂ ಒದಗುವಂತೆ ಮಾಡಿದರು. ಮೇಲ್ಜಾತಿ ಕೀಳ್ಜಾತಿ ಎಂಬ ತಾರತಮ್ಯ ಇಲ್ಲಿಲ್ಲ. ಆತ್ಮೋದ್ಧಾರದ ದಾರಿ, ಧರ್ಮ, ನೀತಿಗಳು ಎಲ್ಲರಿಗೂ ತೆರೆದಿರಬೇಕೆಂಬುದೇ ವಚನಕಾರರ ಧ್ಯೇಯ. ಇದರಲ್ಲಿ ಜಾತಿ ಮತ ಪಂಥಗಳ ಪ್ರಶ್ನೆಯಿಲ್ಲ. ಕುಲಕ್ಕಿಂತ ಶೀಲವೇ ಮುಖ್ಯ. ಕಾಯಕವೇ ಎಲ್ಲರಿಗೂ ಅತ್ಯಗತ್ಯ. ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ. ಹಗ್ಗ ಹೊಸೆಯುವವ, ಸೌದೆ ಹೊರುವವ, ಚಪ್ಪಲಿ ಹೊಲಿಯುವವ, ಹೆಂಡಮಾರುವವ, ಅಗಸ, ಬೆಸ್ತ, ಬೇಡ – ಇವರೆಲ್ಲರೂ ವೇದ ಓದುವ ಬ್ರಾಹ್ಮಣನಷ್ಟೇ ಮುಖ್ಯರು. ಇದು ವಚನಕಾರರ ಸಿದ್ಧಾಂತ. ಅವರ ಜೀವನದ ದೃಷ್ಟಿಯಂತೆಯೇ ಸಾಹಿತ್ಯದ ಸೃಷ್ಟಿ ಕೂಡಾ.

**ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು:**

**1. ಸಾಧಾರಣತೆ ಮತ್ತು ಸರಳತೆ:**

ವಚನಗಳು ಪಾಂಡಿತ್ಯಪೂರ್ಣ ಶಬ್ದಗಳನ್ನು ಬಳಸದಂತೆ, ಪ್ರಾಕೃತ ಭಾಷೆಯಲ್ಲಿ ಜನರ ಹೃದಯಕ್ಕೆ ತಲುಪುವಂತೆ ರಚಿಸಲ್ಪಟ್ಟಿವೆ.

ಬಸವಣ್ಣನವರು "ಕಾಯಕವೇ ಕೈಲಾಸ" ಎಂಬ ವಚನದ ಮೂಲಕ ಕಾಯಕ (ಶ್ರಮ) ಮುಖ್ಯವೆಂದು ಪ್ರತಿಪಾದಿಸಿದ್ದಾರೆ.

**2. ಸಮತಾ ತತ್ತ್ವ (ಸಾಮಾಜಿಕ ಸಮಾನತೆ):**

ಜಾತಿ, ಲಿಂಗ, ಧರ್ಮಗಳ ಬೇಧಭಾವವನ್ನು ವಿರೋಧಿಸಿ ಎಲ್ಲರಿಗೂ ಸಮಾನ ಮಾನವೀಯ ಹಕ್ಕುಗಳಿರಬೇಕು ಎಂದು ವಚನಗಳು ಸಾರುತ್ತವೆ.

ಅಕ್ಕ ಮಹಾದೇವಿ, ಅಲ್ಲಮ ಪ್ರಭು, ಚನ್ನಬಸವಣ್ಣನಂತಹ ಶರಣರು ಸ್ತ್ರೀ–ಪುರುಷ ಸಮಾನತೆಯನ್ನು ಬಲಪಡಿಸಿದರು.

**3. ಸತ್ಯ ಮತ್ತು ಪ್ರಾಮಾಣಿಕತೆ:**

ವಚನಕಾರರು ವಚನಗಳ ಮೂಲಕ ಸತ್ಯಸಂಧತೆಯನ್ನು ಬೋಧಿಸಿದರು. "ಸತ್ಯವಿಲ್ಲದ ಹೃದಯದಲ್ಲಿ ಶಿವನು ನೆಲೆಸುವುದಿಲ್ಲ" ಎಂಬ ಭಾವನೆ ತುಂಬಾ ಮಹತ್ವವಾದುದು.

**4. ಅಹಿಂಸೆ ಮತ್ತು ದಯೆ:**

ಎಲ್ಲ ಜೀವಿಗಳಿಗೂ ದಯೆ ಮತ್ತು ಕರುಣೆಯನ್ನು ತೋರಬೇಕು ಎಂಬುದು ವಚನಗಳ ಮುಖ್ಯ ಸಂದೇಶ. "ಪಶು ಹತ್ಯೆ ಮಾಡೋದು ಪಾಪ" ಎಂಬಂತೆ, ಅಹಿಂಸೆ ಮಹತ್ತ್ವವನ್ನು ವಚನ ಸಾಹಿತ್ಯವು ಪ್ರತಿಪಾದಿಸುತ್ತದೆ.

**5. ದಾಸೋಹ ಮತ್ತು ಪರೋಪಕಾರ:**

ಅನ್ಯರಿಗೆ ಸಹಾಯ ಮಾಡುವುದು, ತಮ್ಮ ಸಂಪತ್ತು ಮತ್ತು ಶ್ರಮವನ್ನು ಸಮುದಾಯಕ್ಕಾಗಿ ಬಳಸುವುದು ಶರಣಸಾಹಿತ್ಯದಲ್ಲಿ ವಿಶೇಷ ಸ್ಥಾನ ಪಡೆದಿದೆ.

ವಚನಗಳು "ಅನ್ನದಾನ" ಮತ್ತು "ಜ್ಞಾನ ದಾನ" ಎಂಬ ತತ್ತ್ವಗಳನ್ನು ಪ್ರಚಾರ ಮಾಡಿದವು.

**6. ಧಾರ್ಮಿಕ ಸಂಪ್ರದಾಯಗಳಿಗೆ ಪ್ರಶ್ನಾತ್ಮಕ ದೃಷ್ಟಿಕೋಣ:**

ವಚನಕಾರರು ಆಚಾರ–ವಿಚಾರಗಳಲ್ಲಿ ಜಡತೆಯನ್ನು ತಿರಸ್ಕರಿಸಿ, ನೈತಿಕ ಜೀವನವನ್ನು ಒತ್ತಿಹೇಳಿದರು. ದೇವರನ್ನು ಗುಡಿಯಲ್ಲಲ್ಲ, ಬದಲಾಗಿ ಶುದ್ಧ ಮನಸ್ಸಿನಲ್ಲಿ ಕಾಣಬೇಕು ಎಂಬ ಸಂದೇಶ ನೀಡಿದರು.

ವಚನ ಸಾಹಿತ್ಯವು ಕೇವಲ ಧಾರ್ಮಿಕ ಅಥವಾ ಕಾವ್ಯ ಸಾಹಿತ್ಯವಲ್ಲ, ಅದು ಪ್ರಾಮಾಣಿಕತೆ, ಸೌಜನ್ಯ, ಸಮಾನತೆ, ಪರೋಪಕಾರ, ಶ್ರಮ ಹಾಗೂ ಶ್ರದ್ಧೆಯನ್ನು ಬೋಧಿಸುವ ಜೀವನ ದರ್ಶನವಾಗಿದೆ. ಇಂದಿಗೂ ವಚನಗಳು ನಮ್ಮ ಜೀವನ ಶೈಲಿಗೆ ಮಾರ್ಗದರ್ಶನ ನೀಡುವ ಮಹತ್ವವನ್ನು ಹೊಂದಿವೆ.

**ಪರಾಮರ್ಶನ ಗ್ರಂಥಗಳು:**


1. ಚಿದಾನಂದಮೂರ್ತಿ ಎಂ., (1967), ಬಸವವಾಣಿ ಮತ್ತು ಶರಣರ ಬೋಧನೆ, ಶ್ರೀಕಂಠೇಶ್ವರ ಪ್ರೆಸ್ ಮತ್ತು ಡಿಪೋ, ಬೆಂಗಳೂರು.
2. ಕಲಬುರ್ಗಿ ಎಂ.ಎಂ., (1993), ಬಸವಣ್ಣನವರ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.